ಒ ಎಸ್ ನಂ. 56/2017

ಪಿ ಡಬ್ಲ್ಯೂ 1 ಶ್ರೀಮತಿ ಪುಟ್ಟಮಾದಮ್ಮ

ದಿನಾಂಕ 13.06.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ – ಪ್ರತಿವಾದಿ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ**

ನಾನು ಕುಂತೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ವಾದಪತ್ರದಲ್ಲಿ ಬರೆಸಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಿಮ್ಮ ವಾದಪತ್ರದಲ್ಲಿನ ಸಂಗತಿಗಳನ್ನು ಬರೆಸುವ ಕಾಲಕ್ಕೆ ನಿಮ್ಮ ವಕೀಲರಿಗೆ ಯಾವ ದಾಖಲೆಗಳನ್ನು ನೀಡಿದ್ದೀರಿ ಎಂದು ನಿಮಗೆ ಗೊತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತು ಎಷ್ಟು ಅಳತೆ ಮತ್ತು ಎಷ್ಟು ಉದ್ದ ಇರುತ್ತದೆ ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ 30 ಅಡಿ ಉತ್ತರ ದಕ್ಷಿಣ 35 ಅಡಿ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ಬರೆಸಿರುವ ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ.

ನಿಮ್ಮ ವಾದಪತ್ರದಲ್ಲಿ ಬರೆಸಿರುವ ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕು ಬಂದಿ ಹಾಗೂ ಅಳತೆಯನ್ನು ಯಾವ ದಾಖಲೆಯನ್ನು ನೋಡಿ ಬರೆಸಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳು ನಿಮಗೆ ಗೊತ್ತೇ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತವಂತಳಾಗಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ.

ನನ್ನ ಯಜಮಾನರು ಪುಟ್ಟಮಾದಯ್ಯರವರು ತೀರಿಹೋಗಿ ಈಗ್ಗೆ 15 ವರ್ಷ ಆಗಿರುತ್ತದೆ. ನನ್ನ ಮಾವ ಕೆಂಪಯ್ಯನಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳ ಪೈಕಿ 1 ನೇ ರಾವಳಲಯ್ಯ 2 ನೇ ಪುಟ್ಟಮಾದಯ್ಯ 3 ನೇ ಸಣ್ಣಮಾದಯ್ಯ 4 ನೇ ಪುಟ್ಟಣ್ಣ. ಹೆಣ್ಣು ಮಕ್ಕಳು ನನ್ನ ತಾಯಿ ಸಣ್ಣಮ್ಮ, ಮಲ್ಲಮ್ಮ ಮತ್ತು ಚಿಕ್ಕನಂಜಮ್ಮ ಆಗಿರುತ್ತಾರೆ.

ದಾವೆಯನ್ನು ನಾನು ಮಾತ್ರ ದಾಖಲಿಸಿದ್ದು ಈ ಮೇಲೆ ಹೇಳಿದ ಕೆಂಪಯ್ಯನ ನಾಲ್ಕು ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಕೆಂಪಯ್ಯನಿಗೆ ದಾವಾ ಷೆಡ್ಯೂಲ್ ಆಸ್ತಿ ಸೇರಿದ್ದು ಎಂದು ವಾದಪತ್ರದಲ್ಲಿ ನಮೂದು ಇದ್ದು ದಾವಾ ಷೆಡ್ಯೂಲ್ ಸ್ವತ್ತು ಕೆಂಪಯ್ಯನಿಗೆ ಸೇರಿದ ಎಂಬ ಬಗ್ಗೆ ದಾಖಲೆ ಇರುತ್ತದೆ. ಸದರಿ ದಾಖಲೆಯು ಯಾವ ದಾಖಲೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ನಿಮ್ಮ ವಾದಪತ್ರದಲ್ಲಿ ನಿಮ್ಮ ಮಾವನಾದ ಕೆಂಪಯ್ಯನಿಗೆ ದಾವಾ ಷೆಡ್ಯೂಲ್ ಸ್ವತ್ತು ಹೇಗೆ ಬಂತು ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಏನನ್ನೂ ಉತ್ತರಿಸದೇ ಸುಮ್ಮನೇ ನಿಂತಿರುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತು ನಿಮ್ಮ ಮಾವನಾದ ಕೆಂಪಯ್ಯನವರ ಸ್ವಾಧೀನದಲ್ಲಿ ಇತ್ತು ಎಂಬ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೀರಾ ಎಂದರೆ ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಯು ಯಾವ ದಾಖಲೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ನನ್ನ ಮಾವನಾದ ಕೆಂಪಯ್ಯ ಮರಣ ಹೊಂದಿದ ನಂತರ ನನ್ನ ಯಜಮಾನರಾದ ಪುಟ್ಟಮಾದಯ್ಯನವರಿಗೆ ದಾವಾ ಷೆಡ್ಯೂಲ್ ಸ್ವತ್ತು ಬಂದಿರುತ್ತದೆ ಎಂದು ವಾದಪತ್ರದಲ್ಲಿ ನಮೂದು ಇದ್ದು ಆ ಬಗ್ಗೆ ಯಾವ ದಾಖಲೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಿಮ್ಮ ಗಂಡನಾದ ಪುಟ್ಟಮಾದಯ್ಯನವರ ಸ್ವಾಧೀನದಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಇತ್ತು ಎಂಬ ಬಗ್ಗೆ ಗ್ರಾಮ ಪಂಚಾಯತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ಯಾವ ವರ್ಷದ್ದು ಎಂದು ನನಗೆ ಗೊತ್ತಿರುವುದಿಲ್ಲ.

ನನಗೆ ಒಬ್ಬನೇ ಮಗ ಇರುತ್ತಾನೆ. ವಾದಿಗೆ ಯಾವುದೇ ಮಕ್ಕಳು ಇಲ್ಲದ ಕಾರಣ ಎಂದು ನಿಮ್ಮ ವಾದಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲದೇ ಬರೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಗನ ಹೆಸರು ಪ್ರಕಾಶ ಎಂದರೆ ಸರಿ. ನನ್ನ ಮಗ ಪ್ರಕಾಶ್ ಕೊಳ್ಳೇಗಾಲ ಅಪರ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 117/2016 ರಂತೆ ಪ್ರತಿವಾದಿಗಳ ವಿರುದ್ಧ ದಾವೆ ದಾಖಲಿಸಿದ್ದನು ಎಂದರೆ ಸರಿ. ಅಸಲು ದಾವಾ ಸಂಖ್ಯೆ 117/2016 ಯು ಇನ್ನೂ ಮುಗಿದಿರುವುದಿಲ್ಲ. ಅಸಲು ದಾವಾ ಸಂಖ್ಯೆ 117/2016 ಗೆ ಸಂಬಂಧಿಸಿದ ದಾಖಲೆಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ.

ಅಸಲು ದಾವಾ ಸಂಖ್ಯೆ 117/2016 ಗೆ ಸಂಬಂಧಿಸಿದ ದಾಖಲೆಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ ಎಂದು ನುಡಿದಿದ್ದು ಸದರಿ ದಾಖಲೆಗಳು ಯಾವುವು ಎಂದರೆ ಸಾಕ್ಷಿಯು ಏನನ್ನೂ ಉತ್ತರಿಸದೇ ಸುಮ್ಮನೇ ನಿಂತಿರುತ್ತಾರೆ.

ನಿಪಿಃ 1 ದಾಖಲೆಯು ಯಾರಿಗೆ ಸಂಬಂಧಿಸಿದ ದಾಖಲೆ ಎಂದು ನನಗೆ ಗೊತ್ತು. ನಿಪಿಃ 1 ದಿನಾಂಕಃ 02.07.1968 ರ ದಾಖಲೆಯಾಗಿದ್ದು ಸದರಿ ಪತ್ರಯವನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೆಂಪಯ್ಯನಿಂದ ರಾವಳ ಪುಟ್ಟಮಾದಯ್ಯ ನವರಿಗೆ ಬರೆದುಕೊಟ್ಟಿರುವ ಪತ್ರ ಎಂದು ನುಡಿಯುತ್ತಾರೆ.

ನಿಪಿಃ 2 ದಾಖಲೆಯಾದ 2016-17 ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ ಅನ್ನು ಪಡೆಯುವ ಕಾಲಕ್ಕೆ ನೀವು ಕುಂತೂರು ಗ್ರಾಮ ಪಂಚಾಯತಿಗೆ ಯಾವ ಯಾವ ದಾಖಲೆಗಳನ್ನು ನೀಡಿದ್ದಿರಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಮಾವ ಕೆಂಪಯ್ಯ ಮರಣ ಹೊಂದಿ ಸುಮಾರು 50 ವರ್ಷ ಆಗಿರುತ್ತದೆ.

ನಿಪಿಃ 2 ಮತ್ತು ನಿಪಿಃ 3 ದಾಖಲೆಗಳು ದಾವೆ ಸಲ್ಲಿಸುವ ಸಲುವಾಗಿ ಪಡೆದುಕೊಂಡ ದಾಖಲೆಗಳಾಗಿರುತ್ತವೆ ಎಂದರೆ ಸರಿ.

ನಿಪಿಃ 4  ದಾಖಲೆಯನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನಿಮಗೆ ಗೊತ್ತಿರುತ್ತದೆಯೆ ಎಂದರೆ ಸಾಕ್ಷಿಯು ನನಗೆ ಓದು ಬರಹ ಬರದ ಕಾರಣ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿಃ 4 ದಾಖಲೆಯು ಯಾವ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸಾಕ್ಷಿಯು ನಮ್ಮ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಸಂಖ್ಯೆ 2 ಆಗಿರುತ್ತದೆ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿಪಿಃ 1 ಮತ್ತು ನಿಪಿಃ 4 ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧ ಪಡದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ನಂದಿನಿ ಎಂ.ಎನ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ.